**ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ**

**ಓ ಎಸ್ ನಂ. 304/2013 ಪಿ . ಡಬ್ಲ್ಯು: 1**

**ದಿನಾಂಕ: 10.04.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ ಮತಿ ವಿ ಕೆ ಡಿ ವಕೀಲರಿಂದ:**

ದಾವಾ ಸ್ವತ್ತಿನ ಹಳೆ ಸರ್ವೆ ನಂ. 3 ಮತ್ತು ಹೊಸ ಸರ್ವೆ ನಂ. 89 ಎಂದು ತೋರಿಸಲು ನ್ಯಾಯಯಾಲಯದ ಮುಂದೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಸದರಿ ದಾಖಲಾತಿ ಯಾವುದೆಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತನ್ನು ಗವಿ ರಂಗನಾಯಕ ರವರು ಕನ್ನಿಗಯ್ಯ ರವರಿಗೆ ಮಾರಾಟ ಮಾಡಿದರು ನಂತರ ಅವರಿಂದ ನಮ್ಮ ತಂದೆ ರಂಗಯ್ಯ ಸ್ವತ್ತನ್ನು ಖರೀದಿಸಿರುತ್ತಾರೆ. ದಾವಾ ಸ್ವತ್ತು ಗವಿರಂಗ ನಾಯಕ ರವರ ಹೆಸರಿಗೆ ಹೇಗೆ ಬಂದಿತು ಎಂದು ನನಗೆ ಗೊತ್ತಿಲ್ಲ. ಗವಿರಂಗನಾಯಕ ರವರು ಕನ್ನಿಗಯ್ಯ ರವರಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಿದ ಕ್ರಯ ಪತ್ರವನ್ನು ನಾನು ನೋಡಿದ್ದೇನೆ ಮತ್ತು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ, ಅದರಲ್ಲಿ ಸ್ವತ್ತಿನ ಸರ್ವೆ ನಂ. 89 ಎಂದು ನಮೂದಾಗಿದೆ.

ದಾವಾ ಸ್ವತ್ತು ಮೂಲತಃ ಕರೆತಿಮ್ಮ ತಾಯಿ ಕರೆಲಕ್ಕಿ , ಕದುರ ತಂದೆ ಕಾಳ ರವರಿಗೆ ಜಂಟಿಯಾಗಿ ಮಂಜೂರಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದರಂತೆ ಕರೆತಿಮ್ಮ ಎಂದರೆ ಪ್ರತಿವಾದಿಗಳ ತಾತ ರವರಿಗೆ 4 ಎಕರೆ ಜಮೀನು ಬಂದಿತು ಮತ್ತು ಉಳಿದ ಜಮೀನು 3 ಎಕರೆ 36 ಗುಂಟೆ ಕದುರ ವರರಿಗೆ ಬಂದಿತು ಎಂದರೆ ನನಗೆ ಗೊತ್ತಿ ಲ್ಲ. ಸರ್ವೆ ನಂ.3 ರ ಒಟ್ಟು ವಿಸ್ತೀರ್ಣ 7 ಎಕರೆ 36 ಗುಂಟೆ.2 ನೆ ಪ್ರತಿವಾದಿ ದಾವಾ ಸ್ವತ್ತು ಅವರಿಗೆ ಸೇರಿದ್ದರು ತಪ್ಪಾಗಿ ಪಹಣಿಯಲ್ಲಿ ಒಟ್ಟು ವಿಸ್ತೀರ್ಣ ಜಯಮ್ಮ ಕೋಂ ರಂಗಯ್ಯ ಎಂಬುವವರ ಹೆಸರಿಗೆ ತಪ್ಪಾಗಿ ವರ್ಗಾವಣೆಯಾಗಿದೆ ಎಂದು, ಉಪವಿಭಾಗಾಧಿಕಾರಿ ತುಮಕೂರು ನ್ಯಾಯಾಲದಯದಲ್ಲಿ ಆರ್. ಆರ್. ಟಿ . ನಂ. 32/13-14 ಎಂದು ಮೇಲ್ಮನವಿ ಸಲ್ಲಿಸಿದ್ದಾರೆ ಎಂಬ ವಿಷ ಯ ನನಗೆ ತಿಳಿದಿದೆ. ಸದರಿ ಜಯಮ್ಮ ಕೋಂ ರಂಗಯ್ಯ ನನ್ನ ಚಿಕ್ಕಮ್ಮ. ಸದರಿ ಮೇಲ್ಮನವಿ ಆದೇಶ ದ ಹಂತದಲಿದ್ದಾಗ ನಾನು ನಮ್ಮ ವಕೀಲರ ಮೂಲಕ ನಮ್ಮ ತಾಯಿ ಗೌರಮ್ಮ ರವರಿಂದ ಉಪವಿಭಾಗಾಧಿಕಾರಿ ತುಮಕೂರು ನ್ಯಾಯಾಲದಯದಲ್ಲಿಮೇಲ್ಮನವಿ ಸಲ್ಲಿಸಿರುತ್ತೇವೆ ಎಂದರೆ ಸರಿ .

ಸದರಿ ಮೇಲ್ಮನವಿಗಳನ್ನು ಕೂಡಿಸಿ ಉಪವಿಭಾಗಧಿಕಾರಿ ತುಮಕೂರು ರವರು ಪ್ರತಿವಾದಿಗಳ ಪರವಾಗಿ ಆದೇಶ ನೀಡಿದ್ದಾರೆ ಎಂದರೆ ಸರಿ . ನಾವು ಸಲ್ಲಿಸಿದ್ದ ಮೇಲ್ಮನವಿಯಲ್ಲಿ ದಾವಾಸ್ವತ್ತು ಕರೆತಿಮ್ಮ ರವರಿಗೆ ಮಂಜೂರಾಗಿದ್ದು ಎಂದು ಹೇಳಿದ್ದೇವೆ ಎಂದರೆ ಸರಿಯಲ್ಲ ಮತ್ತು ಸದರಿ ಕರೆತಿಮ್ಮ ರವರು ಗವಿರಂಗನಾಯಕ ರವರಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಿದ್ದಾರೆ ಎಂದು ನಮೂದಿಸಿದ್ದೇವೆ ಎಂದರೆ ಸರಿಯಲ್ಲ.

ಗವಿರಂಗನಾಯಕ ಅಥವಾ ನನ್ನ ತಂದೆ ರಂಗಯ್ಯ ರವರ ಹೆಸರಿಗೆ ಸರ್ವೆ ನಂ.3 ರ ಪಹಣಿಬಂದಿರುವುದಿಲ್ಲ. ಬದಲಾಗಿ ಸರ್ವೆ ನಂ. 89 ರ ಪಹಣಿ ನಮ್ಮ ತಂದೆ ರಂಗಯ್ಯ ನವರ ಹೆಸರಲ್ಲಿ ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಇಂದಿನ ವರೆಗೂ ಸರ್ವೆ ನಂ. 89 ರ 4 ಎಕರೆ 15 ಗುಂಟೆ ನಮ್ಮ ತಂದೆಯ ಹೆಸರಿನಲ್ಲಿ ಪಹಣಿ ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ.4 ರಂತೆ ಕನ್ನಿಗಯ್ಯ ರವರ ಮಕ್ಕಳು ಈ ದಿನವೂ ಸಹ ಸರ್ವೆ ನಂ. 89 ರ ಸ್ವಾಧಿನದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಕನ್ನಿಗಯ್ಯ ರವರ ಮಕ್ಕಳಿಗೆ ಸಹಾಯ ಮಾಡಲು ಸದರಿ ನಿಪಿ.4 ನ್ನು ಮೋಸದಿಂದ ತಯಾರಿಸಿಕೊಂಡು ಪ್ರತಿವಾದಿಗಳ ಆಸ್ತಿಗೆ ತೊಂದರೆ ಕೊಡಲು ಈ ದಾವೆಯನು ಹೂಡಿದ್ದೇವೆ ಎಂದರೆ ಸರಿಯಲ್ಲ.

ಸರ್ವೆ ನಂ. 3 ರಲ್ಲಿ ನಾವು ಸ್ವಾಧೀನದಲ್ಲದ್ದೇವೆ ಆದರೆ ಪಹಣಿ 2 ನೆ ಪ್ರತಿವಾದಿ, ಲಕ್ಷಮ್ಮ ಮತ್ತು ರಾಮಯ್ಯ ರವರ ಹೆಸರಿನಲ್ಲಿದೆ. ಪ್ರತಿವಾದಿಗಳ ಸ್ವಾಧೀನಕ್ಕೆ ತೊಂದರೆ ಕೊಟ್ಟಿದ್ದಕ್ಕೆ ನನ್ನ ಮೇಲೆ ಕ್ರಿಮಿನಲ್ ಪ್ರಕರಣ ದಾಖಲೆಯಾಗಿದೆ ಎಂದರೆ ಸರಿ . ಸಾಕ್ಷಿ ಮುಂದುವರೆದು ನಾನು ಪ್ರತಿವಾದಿಗಳಿಗೆ ಹೊಡೆದಿರುವುದಿಲ್ಲ.

ನಿಪಿ. 1 ರಲ್ಲಿ ಸರ್ವೆ ನಂ. 89 ಎಂದು ನಮೂದಾಗಿದ ಎಂದರೆ ಸರಿ . ಸಾಕ್ಷಿ ಮುಂದುವರೆದು ನನ್ನ ತಂದೆ ಕೊಂಡಾಗ ಸರ್ವೆ ನಂ. 89 ಎಂದಿತ್ತು ಈಗ ಅದು ರೀ-ಸರ್ವೆ ಆಗಿ ಸರ್ವೆ ನಂ. 3 ಎಂದು ಬದಲಾಗಿದೆ ಎನ್ನುತ್ತಾರೆ. ನಿಪಿ.1 ರಲ್ಲಿ ಸದರಿ ಸ್ವತ್ತು ಯಾವುದೇ ರೀಗ್ರಾಂಟ್,ದರಖಾಸ್ತು, ಇನಾಮು ಗಳಿಗೆ ಒಳಪಟ್ಟಿಲ್ಲ ಎಂದು ನಮೂದಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.89 ರ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಢಿದ್ದೇನೆ ಎಂದರೆ ಸರಿ . ನಿಪಿ.5 ಸಹ ಸರ್ವೆ ನಂ. 89 ಕ್ಕೆ ಸೇರಿದ್ದು ಎಂದರೆ ಸರಿ .ನಿಶಾನೆ ಪಿ.7 ರಿಂದ 42 ಪಹಣಿಗಳನ್ನು ಸರ್ವೆ ನಂ.89 ಮತ್ತು 3 ಕ್ಕೆ ಸಂಬಂದಪಟ್ಟಂತೆ ಹಾಜರುಪಡಿಸಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. 1974-75 ರಿಂದ 1980-81 ನಿಪಿ.7 ರಲ್ಲಿ ಸರ್ವೆ ಂನಂ. 89 ರ ಅಡಿಯಲ್ಲಿ ಕನ್ನಿಗಯ್ಯ ನ ಹೆಸರು ನಮೂದಾಗಿರುತ್ತ ದೆ ಎಂದರೆ ನನಗೆ ಗೊತ್ತಿಲ್ಲ, ಸರ್ವೆ ನಂ. 3 ರ ಅದೇ ಸಾಲಿನ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿರುತ್ತೇನೆ . ನಿಪಿ.8 ಮತ್ತು 9 ಸರ್ವೆ ನಂ.89 ಕ್ಕೆ ಸಂಬಂದಪಟ್ಟಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲಾತಿಗಳನ್ನು ಸತ್ಯವನುನ ಮರೆಮಾಚಲು ನ್ಯಾಯಾಲಯಕ್ಕೆ ಸರ್ವೆ ನಂ. 89 ರ ದಾಖಲಾತಿ ಗಳಿದ್ದರೂ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

2022-23 ನೇ ಸಾಲಿನ ಸರ್ವೆ ನಂ.89 ರ ಪಹಣಿಯಲ್ಲಿ ನಮ್ಮ ತಂದೆಯ ಹೆಸರು ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಚಿಕ್ಕಮ್ಮ ಜಯಮ್ಮ ಕೋಂ ರಂಗಯ್ಯ ರವರು ಸರ್ವೆ ನಂ. 3 ರಲ್ಲಿ 3 ಎಕರೆ 36 ಗುಂಟೆ ಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಜಯಮ್ಮ 3 ಎಕರೆ 36 ಗುಂಟೆಯನ್ನು ರೇವಮ್ಮ ಕೊಂ ಹುಚ್ಚಪ್ಪ ರವರಿಂದ ಕೊಂಡಿರುತ್ತಾರೆ ಮತ್ತು ಉಳಿದ 4 ಎಕರೆ ಜಮೀನು ಕರೆತಿಮ್ಮ ರವರ ವಾರಸುದಾರರ ಸ್ವಾಧೀನದಲ್ಲಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.3 ಮತ್ತು 89 ರ ವಿಚಾರದಲ್ಲಿ ಅನೇಕ ಬಾರಿ ನಮ್ಮಗಳ ನಡುವೆ ಪೋಲೀಸ್ ಠಾಣೆಯಲ್ಲಿ ದೂರು ದಾಖಲಾಗಿರುತ್ತದೆ ಎಂದರೆ ಸರಿ. ತಹಶೀಲ್ದಾರ್‌ರವರು ಸ್ಥಳ ವನ್ನು ಸರ್ವೆಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ವಿವಾದಿತ ಆಸ್ತಿ ಸರ್ವೆ ನಂ. 3 ಆಗಿರುತ್ತದೆ ಎಂದು ತಹಶೀಲ್ದಾರ್ ಉಪವಿಭಾಗಧಿಕಾರಿ ಮತ್ತು ಪೋಲೀಸರಿಗೆ ಒಂದು ರಿಪೋರ್ಟ್ ನೀ

ಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ನಾಗರೀಕ ಹಕ್ಕು ಜಾರಿ ಸಮೀತಿ ನಮ್ಮ ಗಳಿಗೆ ಸರ್ವೆ ನಂ.3 ಕ್ಕೆ ತೊಂದರೆ ನೀಡದಂತೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

ಸರ್ವೆ ನಂ. 3 ಪ್ರತಿವಾದಿಗಳ ತಾತನಿಗೆ ಮಂಜೂರಾದ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ನಾವು ಕೊಂಡ ಆ ಸ್ತಿ ಮತ್ತು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳು ಎಲ್ಲಾ ಸರ್ವೆ ನಂ. 89 ಕ್ಕೆ ಸೇರಿದ್ದವು ಎಂದರೆ ಸರಿ .ಸಾಕ್ಷಿ ಮುಂದುವರೆದು ಸದರಿ ಸರ್ವೆ ನಂ. 89 ನಮ್ಮ ತಂದೆಯವರು ಕೊಂಡ ನಂತರ ಸರ್ವೆ ನಂ.3 ಆಗಿ ಬದಲಾಗಿರುತ್ತದೆ ಎನ್ನುತ್ತಾರೆ. ಬಿಕ್ಕೆ ಗುಡ್ಡ ಕಾವಲ್ ನಲ್ಲಿ ಸರ್ವೆ ನಂ. 3 ಮೊದಲಿಗಿದೆ ಮತ್ತು ಸರ್ವೆ ನಂ. 89 ಕೊನೆಯಲ್ಲಿದೆ ಎಂದರೆ ಸರಿ .

ಉಪವಿಭಾಗಾಧಿಕಾರಿ ತುಮಕೂರು ರವರ ಆದೇಶದಂದತೆ ಸರ್ವೆ ನಂ. 3 ರ ಪಹಣಿ 2 ನೆ ಪ್ರತಿವಾದಿ , ಲಕ್ಷಮ್ಮ ಮತ್ತು ರಾಮಯ್ಯ ರವರ ಹೆಸರಿನಲ್ಲಿ ಬರುತ್ತಿದೆ ಎಂದರೆ ಸಾಕ್ಷಿ ಅವರು ಅದನ್ನು ಮೋಸದಿಂದ ಬದಲಾಯಿಸಿಕೊಂಡಿರುತ್ತಾರೆ ಎನ್ನುತ್ತಾರೆ. ಸರ್ವೆ ನಂ. 89 ರ ವಿಸ್ತೀರ್ಣ 4 ಎಕರೆ. ಸರ್ವೆ ನಂ. 89 ರ ವಿಸ್ತಿರ್ಣ 4 ಎಕರೆ 15 ಗುಂಟೆ ಎಂದರೆ ಸರಿಯಲ್ಲ. ಸರ್ವೆ ನಂ.3 ರ ವಿಸ್ತೀರ್ಣ ಪೂರ್ವಕ್ಕೆ ನಿಂಗಣ್ಣ ರವರ ಜಮೀನು, ಪಶ್ಚಿಮಕ್ಕೆ ರಸ್ತೆ ,ಉತ್ತರಕ್ಕೆ ಗಂಗಣ್ಣ ರವರ ಜಮೀನು ಮತ್ತು ದಕ್ಷಿಣಕ್ಕೆ ನಮ್ಮ ಚಿಕ್ಕಪ್ಪ ರಂಗಯ್ಯ ರವರ ಜಮೀನು . ರಂಗಯ್ಯ,ಜಯಮ್ಮ ರವರ ಗಂಡ ಎಂದರೆ ಸರಿ . ಸರ್ವೆ ನಂ. 3 ರ ಉಳಿಕೆ 3 ಎಕರೆ 36 ಗುರಿಟೆ ಜಮೀನಿನಲಿ ರಂಗಯ್ಯ ಮತ್ತು ಜಯಮ್ಮ ಸ್ವಾಧೀನದಲ್ಲಿರುತ್ತಾರೆ.

ಮುಂದುವರೆದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್ ಸಿ , ಗುಬ್ಬಿ.**